ಸಾಕ್ಷಿಯನ್ನು ದಿಃ04.03.2020 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಲ್ ಎನ್ ಆರ್ ವಕೀಲರಿಂದಃ

ನಿಪಿ-2 ರಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ನ್ನು ನಾನು ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾರಾಯಣಸ್ವಾಮಿ ಹೆಸರಿನಲ್ಲಿರುವ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಗೆ ಒಂದು ಮನೆಗೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕೊಡಬೇಕಾದರೆ ಆತ ಆ ಮನೆಯ ಮಾಲೀಕನಾಗಿರಬೇಕು ಅಥವಾ ಬಾಡಿಗೆದಾರನಾಗಬೇಕು ಅಥವಾ ಅಡಮಾನಿತನಾಗಿರಬೇಕು ಎಂದರೆ ಸರಿ.

ಈಗ ಸಾಕ್ಷಿಗೆ ಚಿಕ್ಕಅಂಕಂಡಹಳ್ಳಿ ಗ್ರಾಮ ಪಂಚಾಯತಿಯವರು ನೀಡಿದ ಹಿಂಬರಹವನ್ನು ತೋರಿಸಿ, ನಾರಾಯಣಮೂರ್ತಿ ರವರ ಹೆಸರಿನಲ್ಲಿ ಯಾವುದೇ ಆಸ್ತಿಗಳಿರುವುದಿಲ್ಲ ಎಂದು ಹಿಂಬರಹ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಬೆಸ್ಕಾಂ ರವರು ನೀಡಿದ ಹಿಂಬರಹವನ್ನು ತೋರಿಸಿ, ನನ್ನ ಹೆಸರಿನಲ್ಲಿ ಯಾವುದೇ ವಿದ್ಯುತ್‌ಚ್ಛಕ್ತಿ ಸಂಪರ್ಕ ಇರುವುದಿಲ್ಲ ಎಂದು ಹಿಂಬರಹ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು.

ನಿಪಿ-5, 6, 14 ರಿಂದ 32 ರ ದಾಖಲೆಗಳನ್ವಯ ನಾನು ದಾವಾ ಸ್ವತ್ತನ್ನು ನನ್ನ ಹೆಸರಿಗೆ ಖಾತೆ ಮಾಡುವಂತೆ ಪಂಚಾಯತಿಗೆ 1986 ರಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಸ್ವೀಕೃತಿ

ಅಥವಾ ಪ್ರತಿಗಳು ನನ್ನ ಬಳಿ ಇರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ನನ್ನ ತಾತನ ಹೆಸರಿನಲ್ಲಿ 1968 ರಿಂದ ಇತ್ತು.



ದಾವಾ ಶೆಡ್ಯೂಲ್ ಸ್ವತ್ತು ನನ್ನ ತಾತ ಹೆಸರಿನಲ್ಲಾಗಲಿ ಅಥವಾ ನನ್ನ ತಂದೆ ಹೆಸರಿನಲ್ಲಾಗಲಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲಾತಿಗಳು ನನ್ನ ಬಳಿಯೂ ಸಹ ಇರುವುದಿಲ್ಲ. ನಾನು ಮೇಲೆ ಹೇಳಿದಂತೆ ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ಅರ್ಜಿಯ ಜೊತೆ ನನ್ನ ತಂದೆ ಹೆಸರಿಗೆ ಆದ ಹಕ್ಕು ಬಿಡುಗಡೆ ಪತ್ರವನ್ನು ನೀಡಿರುತ್ತೇನೆ. ಸದರಿ ದಾವಾ ಶೆಡ್ಯೂಲ್ ಸ್ವತ್ತು ಸದರಿ ಹಕ್ಕು ಬಿಡುಗಡೆ ಪತ್ರದಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿ.

ಈಗ ಸಾಕ್ಷಿಗೆ ಚಿಕ್ಕಅಂಕಂಡಹಳ್ಳಿ ಗ್ರಾಮ ಪಂಚಾಯತಿಯವರು ನೀಡಿದ ಹಿಂಬರಹವನ್ನು ತೋರಿಸಿ, ನನ್ನ ಹೆಸರಿನಲ್ಲಿ 1998-99 ಸಾಲಿನಲ್ಲಿ ಯಾವುದೇ ಆಸ್ತಿಗಳ ಖಾತೆ ಇರುವುದಿಲ್ಲ ಮತ್ತು ಯಾವುದೇ ಮೂಲ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದು ಹಿಂಬರಹ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ-6 ಎಂದು ಗುರುತಿಸಲಾಯಿತು.

ನಿಪಿ-16 ರಲ್ಲಿ ಖಾತೆ ನಂ. 235 ರಲ್ಲಿ ಕೃಷ್ಣವೇಣಿ ಎಂಬುವವರ ಹೆಸರಿನಲ್ಲಿ ತೋರಿಸಲಾಗಿದೆ ಎಂದರೆ ಸರಿ. ಈಗ ಸಾಕ್ಷಿಗೆ ಚಿಕ್ಕಅಂಕಂಡಹಳ್ಳಿ ಗ್ರಾಮ ಪಂಚಾಯತಿಯವರು ನೀಡಿದ ಹಿಂಬರಹವನ್ನು ತೋರಿಸಿ, ಸದರಿ ಕೃಷ್ಣವೇಣಿ ಹೆಸರಿನಲ್ಲಿ ಯಾವುದೇ ಖಾತಾ ದಾಖಲಾತಿಗಳು ಲಭ್ಯವಿರುವುದಿಲ್ಲ ಎಂದು ಹಿಂಬರಹ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಅದು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಯನ್ನು ರುಜುವಾತಿಗೊಳಪಟ್ಟು ಅದನ್ನು ನಿಡಿ-7 ಎಂದು ಗುರುತಿಸಲಾಯಿತು.

ನನಗೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದಿದ್ದರೂ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ. ನನ್ನ ಖಾತೆಗೆ ಸಂಬಂದಿಸಿದಂತೆ 1 ನೇ ಪ್ರತಿವಾದಿ ನನ್ನ ವಿರುದ್ಧ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಅಫೀಲು ಸಲ್ಲಿಸಿರುತ್ತಾರೆ ಎಂದರೆ ಸರಿ.



ಸದರಿ ಅಫೀಲಿನಲ್ಲಿ ನನ್ನ ಖಾತೆಯನ್ನು ತಡೆ ಇಡುವಂತೆ ಆದೇಶ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಶೆಡ್ಯೂಲ್ ಸ್ವತ್ತಿನಲ್ಲಿ ಈಗಲೂ 1 ನೇ ಪ್ರತಿವಾದಿಯೇ ಮಾಲೀಕನಾಗಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 292/3 ಖಾತಾ ನಂಬರ್ 231 ರಿಂದ 235 ರಂತೆ ಬಂದಲಾವಣೆ ಆಗಿರುವುದಿಲ್ಲ. ಆ ರೀತಿಯ ಸ್ವತ್ತುಗಳು ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಸರ್ವೇ ನಂಬರ್ 292/3 ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ, ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ದೀಪು ಬಿ.ಸಿ.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಬಂಗಾರಪೇಟೆ.**